ತೊಂದರೆಯಾದಂತಿತ್ತು. ಯಾವುದೋ ತಪ್ಪಿನ ಕಾರಣ ಪೂರ್ತಿ ಸಂಬಳ ಕೈಗೆ ಬರುತ್ತಿರಲಿಲ್ಲ. ಮನೆ ನಡೆಯುವದೇ ಕಷ್ಟವಾದಾಗ ಅವರಿಗೆ ಚಿಂತೆಯಾದದ್ದು ನನ್ನ ಬಗ್ಗೆ. ಆದರೆ ಕಾಕು ನನಗೇನೂ ಹೇಳದೇ ಅವ್ವನಿಗೆ ಒಂದು ಪತ್ರ ಕೊಟ್ಟಿದ್ದರು. ನಾನು ಬಸ್ಸಿನಲ್ಲೋ ರೈಲಿನಲ್ಲೋ ಟಿಕೆಟ್ ಮಾಡಿಸಿಕೊಂಡು ಹೋಗುವುಷ್ಟು ಸೌಕರ್ಯ ಉಳ್ಳವನಲ್ಲ. ನಮ್ಮೂರಿನ ಗೌಡರ ಗಾಡಿಗಳು ಮೆಣಸಿನಕಾಯಿ ಮುಂತಾದ ಮಾಲು ತೆಗೆದುಕೊಂಡು ಪ್ರತಿ ಹದಿನೈದು ದಿನಗಳಿಗೊಮ್ಮೆ ಬೆಂಗಳೂರಿಗೆ ಬರುತ್ತಿದ್ದವು. ನಾನು ಅದರಲ್ಲೇ ಏರಿಕೊಳ್ಳುತ್ತಿದ್ದೆ. ಸಾಮಾನಿನ ಚೀಲಗಳಿಗೆ ಹೆಗಲು ಕೊಡುತ್ತಿದ್ದೆ. ಮಿಕ್ಕಂತೆ ಗೌಡರಿಗೂ ನನ್ನ ಮೇಲೆ ಪ್ರೀತಿ, ಅಭಿಮಾನ ಹೆಚ್ಚು. ಈ ಬಾರಿ ಹೋಗಿ ಅವ್ವನಿಗೆ ಪತ್ರ ಕೊಟ್ಟ ಮೇಲೆ ಅವಳ ಹಣೆಯ ಗೆರೆಗಳು ಚಿಂತೆಯಿಂದ ಇನ್ನೂ ಆಳವಾದವು. “ಅವರಿಗೆ ರೊಕ್ಕದ್ದೇನೋ ತ್ರಾಸಾಗೇದಂತ. ನಾವ... ಸುಧಾಮನ ಒಕ್ಕಲ. ಏನ ಕೊಡೋಹಂಗಿದ್ದೇವಿ? ಖರೇ ಮಗನ್ನ ಇಟ್ಟೇವಿ ಅಂದ ಮ್ಯಾಲೆ ಏನರ ಮಾಡಬೇಕಲಾ...” ಎನ್ನುತ್ತ ಅವ್ವ ಹಪ್ಪಳ, ಸಂಡಿಗೆ, ಉಂಡಿ, ಚೂಡಾ, ಚಕ್ಕಲಿಗಳನ್ನು ತುಂಬಿದಳು. ಗೌಡರ ಗಾಡಿಯಲ್ಲಿ ನನ್ನ ಲಗೇಜು ಜಾಸ್ತಿಯಾಯಿತು. ಕಾಕು ಅವನ್ನು ಚಿಕ್ಕ ಚಿಕ್ಕ ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಸಿ ದುಬಾರಿಯಾಗಿ ಅಂಗಡಿಗಳಿಗೆ, ಸ್ನೇಹಿತೆಯರಿಗೆ ಮಾರುತ್ತಿದ್ದರು. “ಊರಿಂದ ಎಲ್ಲಾ ಫ್ರೆಶ್ ಮಾಡಿ ತರಸ್ತೇನಿ. ಹೊಸಾ ಬಿಸಿನೆಸ್ ಸುರು ಮಾಡೇನಿ” ಎಂದು ಹೇಳಲಾರಂಭಿಸಿದರು. “ನಿನ್ನ ಹೊರಗ ಕಳಸು ಅನ್ನಿಲ್ಲಲಾ... ಅಷ್ಟ ಸಾಕು. ಏನರೆ ಮಾಡ್ಕೊವಳ್ಳ್ಯಾಕ...” ಎಂದಿದ್ದರು ಕಾಕಾ. ಅವರು ಕಾಕೂನ ಹಿಂಬಾಲಕರಷ್ಟೇ. ಕರೆದಲ್ಲಿ ಹೋಗುವುದು, ಹೇಳಿದ್ದನ್ನು ಮಾಡುವುದು... “ಇಲ್ಲದಿದ್ರ ಉಳಿಗಾಲನ ಇಲ್ಲ ನನಗ...” ಎಂದು ಅಪರೂಪಕ್ಕೆ ನಗಾಡುತ್ತಿದ್ದುದಿತ್ತು. ಕ್ರಮೇಣ ಅವ್ವ ಹಳ್ಳಿಯಲ್ಲಿ ಇನ್ನಿಬ್ಬರು ಹೆಂಗಸರೊಡಗೂಡಿ ವಿಶೇಷಗಳಾದ ಅನಾರಸ, ಹೆಸರಿಟ್ಟಿನ ಉಂಡಿ, ಚಕ್ಕಲಿ, ಶಂಕರಪಾಳೆ, ಚಟ್ನಿಪುಡಿ, ರಂಜಕ... ಇತ್ಯಾದಿಗಳನ್ನು ಮಾಡಿ ಕಳಿಸಿದರೆ ಕೊಳ್ಳಲು ಕಾಕೂನ ಸ್ನೇಹಿತೆಯರು ಸಾಲುಗಟ್ಟುತ್ತಿದ್ದರು. ಅಂತೂ ತನ್ನ ಮಗನ ಖರ್ಚಿಗೆ ಕೊಂಚವೂ ಕಡಿಮೆ ಮಾಡಲಿಲ್ಲ ಕಾಕು. ಮೂರು ವರ್ಷಗಳವರೆಗೂ ಈ ಅಭಿಯಾನ ಮುಂದುವರೆಯಿತು. ಅವ್ವ ಮಾಡಿ... ನಾನು ಹೊತ್ತು ತಂದು ಸೋತು ಸುಣ್ಣವಾಗಿದ್ದೆವು.

ಮಮತೆಯ ಕಡಲಾಗಿದ್ದ ನನ್ನ ಕಾಕಾನಲ್ಲಿ ಅವಗುಣಗಳಿರಲಿಲ್ಲವೆಂದು ಹೇಳಲಾರೆ. ಅಥವಾ ಅದು ಬೆಂಗಳೂರಿನ ಜೀವನ ಶೈಲಿ ಇದ್ದರೂ ಇರಬಹುದು. ನಾನು ಇಲ್ಲಿ ವಾಸಿಸಲಾರಂಭಿಸಿದ ಮೇಲೆಯೇ ನನಗೆ ಅದರ ಅರಿವಾದದ್ದು. ಆಗಾಗ ಅವರ ಕೈಯಲ್ಲಿ ಸಿಗರೇಟು ನೋಡುತ್ತಿದ್ದೆ. “ಊರಾಗ ಹೇಳಬ್ಯಾಡಾ...” ಎಂದದ್ದಕ್ಕೆ ತಲೆಯಾಡಿಸಿದ್ದೆ. ಒಂದು ದಿನ ಕಾಕಾ ನೀಟಾಗಿ ಜೋಡಿಸಿದ್ದ ಗ್ಲಾಸುಗಳನ್ನು ತೆಗೆದಿಟ್ಟು ತಂದಿದ್ದ ಚಿಪ್ಸ್ ತಟ್ಟೆಯಲ್ಲಿ ಸುರಿದರು. ಹಿಂದೆಯೇ ವಿಸ್ಕಿಯ ಬಾಟಲ್ ಬಂತು. ಸ್ವತಃ ಕಾಕಾನೇ ಅಜಯನಿಗೆ ಗ್ಲಾಸಿನಲ್ಲಿ ಸುರಿದು ಕೊಡುವುದನ್ನು ಬಾಗಿಲ ಮರೆಯಿಂದಲೇ ನೋಡಿ ಹೌಹಾರಿದೆ. ನನ್ನ ಊಹೆಗೂ ನಿಲುಕದ ವಿಷಯ. ಜೊತೆಗೇ ಚಿಪ್ಸ್ ಮೆಲ್ಲುತ್ತ ಕುಳಿತಿದ್ದ ಕಾಕು ಕುಡಿಯಲಿಲ್ಲವಾದರೂ ಜೊತೆಗೆ ಕುಳಿತು ಗಂಡ, ಮಗನಿಗೆ ಕಂಪನಿ ಕೊಟ್ಟಿದ್ದರು. ಕಾಕಾ, “ಪಾಂಡು... ಬಾರೋ...” ಎಂದು ಕೂಗಿದಾಗ, “ನನಗ ಬ್ಯಾಡಾ. ಅವ್ವ ಬೈತಾಳ” ಎಂದದ್ದೇ ಕೋಣೆಯ ಬಾಗಿಲು ಧಡ್ ಎಂದು ಹಾಕಿದ್ದೆ. ಕಾಕು, “ಹಳ್ಳಿ ಗುಗ್ಗ ಅಂವ, ಅಂವೇನು ಬರ್ತಾನ? ಇನ್ನೂ ಅವರವ್ವನ ಸೆರಗ ಬಿಟ್ಟಿಲ್ಲ...” ಎಂದಾಗ ಮೂವರೂ ಸೇರಿ ಬಿದ್ದು ಬಿದ್ದು ನಕ್ಕದ್ದಿತ್ತು. ಈ ವಿಷಯವನ್ನು ನಾನು ಊರಲ್ಲಿ ಹೇಳದಷ್ಟು ಪ್ರಬುದ್ಧನಾಗಿದ್ದೆ.